# ದಿವ್ಯ ಪ್ರಬಂಧ ತಿರುವಾಯ್ಮೊಳಿ

ಶ್ರೀವೈಷ್ಣವ ಮತದ ಪ್ರಸಿದ್ಧಗ್ರಂಥವನ್ನು ಪರಿಚಯ ಮಾಡಿ ಕೊಟ್ಟಿರುವ ಲೇಖಕಿ ಬೆಂಗಳೂರಿನವರು. ಭಕ್ತನು ಭಗವಂತನನ್ನು ಆರಾಧಿಸುವಾಗ ಭಾವರಾಜ್ಯದಲ್ಲಿ ವಿಹರಿಸುತ್ತ ಅವನ ಸಾನ್ನಿಧ್ಯವನ್ನು ಅನುಭವಿಸುವ ವರ್ಣನೆ ಇಲ್ಲಿದೆ. ಅದರೊಂದಿಗೆ ಶ್ರೀ ವಿಷ್ಣುಚಿತ್ತ ಆಳ್ವಾರರ ಪರಿಚಯವೂ ಇದೆ.

ಶಶಿಕಲಾ ಶ್ರೀಧರ

**ಧ**ರ್ಮಗ್ಲಾನಿಯುಂಟಾದಾಗ ಶಾಶ್ವತವಾದ ಧರ್ಮವನ್ನು ಪುನಃ ಸ್ಥಾಪಿಸಲು ಭಗವಂತನು ಅವತರಿಸುವಂತೆಯೇ ಅವನ ನಿತ್ಯ ಕೈಂಕರ್ಯದಲ್ಲಿ ತೊಡಗಿರುವ ವೈಕುಂಠವಾಸಿಗಳೂ ಭೂಮಿಯಲ್ಲಿ ಅವತರಿಸಿ ಭಕ್ತಿ ಮತ್ತು ಪ್ರಪತ್ತಿಯ ಅನುಷ್ಠಾನದ ಮೂಲಕ ಭಗವತ್ಪ್ರಾಪ್ತಿಯನ್ನು ಸಾಧ್ಯವಾಗಿಸಿಕೊಳ್ಳುವಂಥ ಸಾಧನೆಯ ಮಾರ್ಗಗಳನ್ನು ಸಾರುತ್ತಾರೆ. ಭಕ್ತಿಯ ಆಳಕ್ಕಿಳಿದ ವೈಷ್ಣವ ಸಂತರು ತಮ್ಮ ಭಕ್ತಿಪಾಶದಿಂದ ಭಗವಂತನನ್ನು ಕಟ್ಟಿಹಾಕಿ ಅವನನ್ನಾಳಿದರು. ಅಂತೆಯೇ ತಮ್ಮ ಉಪದೇಶಾಮೃತದಿಂದ ಭಕ್ತರ ಮನಸ್ಸನ್ನು ಸೆಳೆದು ಅವರಿಗೆ ಮಾರ್ಗದರ್ಶಕರಾಗಿ ಪ್ರಸಿದ್ಧರಾದರು. ಆದುದರಿಂದಲೇ ಇವರು 'ಆಳ್ವಾರರು' ಎಂದು ಕರೆಯಲ್ಪಟ್ಟರು. ಆಳ್ವಾರರು ಎಂಬ ಪದದ ಅರ್ಥ ಭಗವಂತನ ಭಕ್ತಿಯಲ್ಲಿ ಮುಳುಗಿದವರು ಎಂದು.

ಈ ಆಳ್ವಾರರುಗಳಲ್ಲಿ ಅತ್ಯಧಿಕ ಮಹತ್ವವನ್ನು ಪಡೆದವರು ಪೆರಿಯಾಳ್ವಾರ್ ಎಂದೇ ಕರೆಯಲ್ಪಡುವ ಶ್ರೀವಿಷ್ಣುಚಿತ್ತರು. ಹೆಸರಿಗೆ ತಕ್ಕಂತೆಯೇ ವಿಷ್ಣುವನ್ನು ಸದಾ ಚಿತ್ತದಲ್ಲಿ ಧರಿಸಿದ್ದರಿಂದ (**ವಿಷ್ಣುಃ ಚಿತ್ತೇ ಯಸ್ಯ**) ಮಾತ್ರವಲ್ಲ ಇವರ ಭಕ್ತಿಗೆ, ವಾತ್ಸಲ್ಯಕ್ಕೆ, ಮನಸೋತ ವಿಷ್ಣುವೂ ಇವರ ಬಗ್ಗೆ ಸದಾ ಚಿಂತಿಸುತ್ತಿದ್ದುದರಿಂದ (**ವಿಷ್ಣೋಃ ಚಿತ್ತೇ ಯಃ**) ಎಂಬುದಾಗಿ ಕೊಂಡಾಡಲ್ಪಟ್ಟವರು. ಸಾಕ್ಷಾತ್ ಮಹಾವಿಷ್ಣುವೇ ಇವರಿಂದ ಮಂಗಳಾಶಾಸನ ಮಾಡಿಸಿಕೊಳ್ಳಬೇಕೆಂದು ಆಶಿಸಿ ಇವರಿಗೆ ದರ್ಶನವಿತ್ತಾಗ ಉನ್ನತ ಪ್ರೇಮದೆಶೆಯಲ್ಲಿದ್ದ ವಿಷ್ಣುಚಿತ್ತರು ತಾನೇ ರಕ್ಷಕ ಭಗವಂತನೇ ರಕ್ಷ್ಯ, ಸ್ವಾಮಿಗೇ ತಾನು ನಾಥ, ಆ ಸ್ವಾಮಿಗೆ ಯಾವ ತೊಂದರೆಯೂ ಉಂಟಾಗಬಾರದೆಂದು **ಪಲ್ಲಾಂಡ್, ಕಾಪ್ಪೀಡಲ್**‌ಗಳನ್ನು ಹಾಡಿ 'ಭಟ್ಟನಾಥ' 'ಪಟ್ಟರಪಿರಾನ್' ಎಂದು ಕರೆಯಲ್ಪಟ್ಟರು. ಇದು ವಾತ್ಸಲ್ಯ ಭಕ್ತಿಯ ಅತ್ಯುನ್ನತ ಸ್ಥಿತಿಯೇ ಹೊರತು ಇಲ್ಲಿ ಅಹಂಕಾರದ ಲೇಪ ಲವಲೇಶವೂ ಇರಲಿಲ್ಲ. ದೇಹಬೋಧೆಯನ್ನೇ ಮರೆತು ದೇವನಲ್ಲೇ ಸದಾ ಮನಸ್ಸನ್ನು ನೆಟ್ಟಿದ್ದ ಇವರಲ್ಲಿ 'ಅಹಂ' ಉದಿಸಲು ಸಾಧ್ಯವೇ ಇರಲಿಲ್ಲ.



ಶ್ರೀವಿಲ್ಲಿಪುತ್ತೂರಿನ ದೇವಸ್ಥಾನ

ಇಂತಹ ಮಹಾಚೇತನದ ಪವಿತ್ರ ಜೀವನದ ಅತಿ ಮುಖ್ಯವಾದ ಕೆಲವು ಘಟನೆಗಳನ್ನು ಸ್ಮರಿಸಿ, ಅವರು ರಚಿಸಿದ ಕೆಲವು ದಿವ್ಯಪ್ರಬಂಧ, ಪಾಡಲ್‌ಗಳನ್ನು ಪರಿಚಯಿಸುವ ಒಂದು ಸಣ್ಣ ಪ್ರಯತ್ನ ಈ ಲೇಖನದ ಉದ್ದೇಶ.

ಪಾಂಡ್ಯದೇಶದ ಶ್ರೀವಿಲ್ಲಿಪುತ್ತೂರು ಎಂಬ ಪ್ರಸಿದ್ಧ ಯಾತ್ರಾ ಸ್ಥಳದಲ್ಲಿ ಭಗವದ್ಭಕ್ತರಾದ ಮುಕುಂದಾರ್ಯ ಮತ್ತು ಪದ್ಮ ಎಂಬ ದಂಪತಿಗಳಿಗೆ ಜನಿಸಿದ, ಗರುಡಾಂಶಸಂಭೂತ ಶಿಶುವೇ ವಿಷ್ಣುಚಿತ್ತರು. ತಮ್ಮ ಮಗುವಿಗೆ ಚೌಲ, ಉಪನಯನ ಮೊದಲಾದ ಪಂಚಸಂಸ್ಕಾರಗಳನ್ನು ಕೊಟ್ಟು ವೇದಾಧ್ಯಯನ ಸಂಪನ್ನನನ್ನಾಗಿ ಮಾಡಿದರು ಆ ಧನ್ಯ ದಂಪತಿಗಳು. ವಿಷ್ಣುಚಿತ್ತರು ಬೆಳೆದು ದೊಡ್ಡವರಾದ ಮೇಲೆ ಭಗವಂತನ ನಿತ್ಯ ಸೇವೆಯಾಗಿ ಪುಷ್ಪಕೈಂಕರ್ಯವನ್ನು ಕೈಗೊಂಡರು. ಅದಕ್ಕಾಗಿ ಪೂಜೆಗೆ ಯೋಗ್ಯವಾದ ಅನೇಕ ಹೂಗಿಡಗಳನ್ನು ತಾವೇ ಬೆಳೆಸಿ,

ಸುಂದರವಾಗಿ ಅರಳುವ ಆ ಪುಷ್ಪಗಳಿಂದ ತಮ್ಮ ಇಷ್ಟದೈವವಾದ ವಟಪತ್ರಶಾಯಿ ಭಗವಂತನನ್ನು ಸಿಂಗರಿಸಿ ಸಂತೋಷ ಪಡುತ್ತಿದ್ದರು.

ವಿಲ್ಲಿಪುತ್ತೂರಿನ ಸಮೀಪದಲ್ಲಿದ್ದ ಮಧುರಾನಗರಿಯ ದೊರೆಯಾದ ಶ್ರೀ ವಲ್ಲಭದೇವ ಧರ್ಮಿಷ್ಠನೂ, ವಿದ್ವಜ್ಜನ ಪಕ್ಷಪಾತಿಯೂ, ಪ್ರಜಾಕ್ಷೇಮಚಿಂತಕನೂ ಆಗಿದ್ದ. ಹಲವಾರು ಬಾರಿ ಮಾರುವೇಷದಿಂದ ಊರಲ್ಲಿ ಸಂಚರಿಸಿ ತನ್ನ ಪ್ರಜೆಗಳ ಕಷ್ಟಸುಖಗಳನ್ನು ಅರಿಯಲು ಪ್ರಯತ್ನಿಸುತ್ತಿದ್ದ. ಒಮ್ಮೆ ವಲ್ಲಭದೇವ ಹೀಗೆಯೇ ರಾತ್ರಿಯ ವೇಳೆ ತನ್ನ ರಾಜ್ಯದಲ್ಲಿ ಸಂಚರಿಸುತ್ತಿದ್ದಾಗ ತೇಜಸ್ವಿಯಾದ ಬ್ರಾಹ್ಮಣನೊಬ್ಬನನ್ನು ಸಂಧಿಸಿ, "ಅಯ್ಯಾ ಜ್ಞಾನಿಯಾದ ನೀನು ನನಗೆ ಏನನ್ನಾದರೂ ಬೋಧಿಸು" ಎಂದು ಕೇಳಿಕೊಂಡ. ಅದಕ್ಕುತ್ತರವಾಗಿ ಆ ಬ್ರಾಹ್ಮಣನು 'ಮಳೆಗಾಲದಲ್ಲಿ ಸುಖವಾಗಿರುವ ಸಲುವಾಗಿ ಮನುಷ್ಯ ಉಳಿದ ಎಂಟು ತಿಂಗಳ ಕಾಲ ಕಷ್ಟಪಟ್ಟು ದುಡಿಯುತ್ತಾನೆ. ರಾತ್ರಿಯ ಸುಖನಿದ್ರೆಗಾಗಿ ಹಗಲೆಲ್ಲಾ ಹೆಣಗುತ್ತಾನೆ. ವೃದ್ಧಾಪ್ಯದಲ್ಲಿ ಸುಖವಾಗಿರಲು ತಾರುಣ್ಯದಲ್ಲಿ ಬಹಳ ಕಷ್ಟಪಟ್ಟು ದುಡಿದು ಧನಸಂಗ್ರಹ ಮಾಡುತ್ತಾನೆ. ಇದರಂತೆಯೇ ಪರದಲ್ಲಿ ಸುಖವಾಗಿರಬೇಕಾದರೆ ಮನುಷ್ಯನು ಇಡೀ ಜೀವಮಾನ ದುಡಿದು ಧರ್ಮವನ್ನು ಸಂಗ್ರಹಿಸಬೇಕು" ಎಂದು ಹೇಳಿದನು. ಈ ಸಂದೇಶದ ಕೊನೆಯ ಚರಣ ವಲ್ಲಭರಾಜನ ಮನಸ್ಸಿನಲ್ಲಿ ನೇರವಾಗಿ ನಾಟಿ ಅದನ್ನು ಸಾಧಿಸುವುದು ಹೇಗೆ ಎಂಬ ಪ್ರಶ್ನೆ ಅವನನ್ನು ಬಹಳವಾಗಿ ಕಾಡತೊಡಗಿತು. ಹಗಲಿರುಳೂ ಈ ಚಿಂತೆಯಲ್ಲೇ ಇದ್ದ ಅರಸನನ್ನು ಗಮನಿಸಿದ ಮಂತ್ರಿ ಶೆಲ್ವನಂಬಿ ಇದನ್ನು ಕುರಿತು ಒಂದು ವಿದ್ವತ್‌ಸಭೆಯನ್ನು ಸೇರಿಸಿ ಯಾವ ವಿದ್ವಾಂಸನು ರಾಜನಿಗೆ ಸಮಾಧಾನಕರ ಉತ್ತರವನ್ನು ನೀಡುತ್ತಾನೋ ಅವನಿಗೆ ಒಂದು ಮೂಟೆ ಹೊನ್ನನ್ನಿತ್ತು ಸನ್ಮಾನಿಸುವುದಾಗಿ ಘೋಷಿಸಿ ಅದಕ್ಕಾಗಿ ಒಂದು ದಿನವನ್ನೂ ಗೊತ್ತುಮಾಡಿ, ಡಂಗೂರ ಹೊಡೆಸಿದನು.

ಇತ್ತ ಶ್ರೀ ವಿಷ್ಣುಚಿತ್ತರ ಕನಸಿನಲ್ಲಿ ವಟಪತ್ರಶಾಯಿ ರೂಪದಲ್ಲಿ ಭಗವಂತ ಗೋಚರಿಸಿ ಆ ವಿದ್ವತ್‌ಗೋಷ್ಠಿಯಲ್ಲಿ ಭಾಗವಹಿಸಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಮೋಕ್ಷಕ್ಕೆ ಅತಿ ಸುಲಭವಾದ ಮಾರ್ಗ ಯಾವುದೆಂಬುದನ್ನು ವಿವರಿಸಲು ಕಟ್ಟಪ್ಪಣೆ ಮಾಡಿದನು. ವಿದ್ವಾಂಸರೆದುರು, ಅರಸರೆದುರು ತನ್ನಿಂದ ವಾದ ಮಾಡಲಾಗುವುದಿಲ್ಲವೆಂದು ಹೇಳಿದಾಗ ತಾನೇ ಅವರ ಮೂಲಕ ಮಾತನಾಡುವುದಾಗಿ ಭರವಸೆ ನೀಡಿದನು. ಇದರಂತೆ ಅನೇಕ ವಿದ್ವನ್ಮಣಿಗಳು ಸೇರಿದ್ದ ಆ ಸಭೆಯಲ್ಲಿ ಭಗವಂತನನ್ನು ಅಂತರಂಗದಲ್ಲಿಟ್ಟುಕೊಂಡು ವಿಷ್ಣುಚಿತ್ತರು ನಾರಾಯಣನ ಪರತತ್ತ್ವದ ಬಗ್ಗೆ ವೇದೋಪನಿಷತ್ತುಗಳಿಗೆ ವಿರೋಧವಿಲ್ಲದಂತೆ ವ್ಯಾಖ್ಯಾನವನ್ನು ಮಾಡಿ ಎಲ್ಲರ ಮನಸ್ಸಿನಲ್ಲಿ ಏಳಬಹುದಾದ ಎಲ್ಲ ಪ್ರಶ್ನೆಗಳಿಗೆ ಸುದೀರ್ಘವಾಗಿ ವಿವರಣೆ ಕೊಟ್ಟರು. ರಾಜ ವಲ್ಲಭದೇವನಿಗೆ ಎಲ್ಲ ಸಂಶಯಗಳೂ ನಿವಾರಣೆಯಾಗಿ ಅತ್ಯಾನಂದವಾಯಿತು. ಅವನು ವಿಷ್ಣುಚಿತ್ತರನ್ನು ಪಟ್ಟದಾನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿ ಸನ್ಮಾನಿಸಿದನು. ವಿಷ್ಣುಚಿತ್ತರಾದರೋ ಇವೆಲ್ಲವೂ ಶ್ರೀಹರಿಗೇ ಸೇರಿದುದು ಎಂದು ಭಗವದ್ಧ್ಯಾನದಲ್ಲೇ ಇದ್ದರು. ತನ್ನ ಅಂತರಂಗಭಕ್ತನ ಈ ವೈಭವವನ್ನು ನೋಡಲು ಸಾಕ್ಷಾತ್ ಮಹಾವಿಷ್ಣುವೇ ಗರುಡವಾಹನನಾಗಿ ಬಂದು ದರ್ಶನವಿತ್ತನು. ಸರ್ವಾಂಗಸುಂದರನಾದ ಆ ಪರಮಾತ್ಮನಿಗೆ ಎಲ್ಲಿ ದೃಷ್ಟಿತಾಗುವುದೋ ಎಂದು ಕಳವಳಗೊಂಡ ವಿಷ್ಣುಚಿತ್ತರು ಒಡನೆಯೆ ಹನ್ನೆರಡು ಪಾಶುರಗಳ ಮೂಲಕ 'ಪಲ್ಲಾಂಡು' ಹಾಡಿ ಭಗವಂತನಿಗೇ ಶ್ರೀರಕ್ಷೆ ಇಟ್ಟರು. ಈ ಕೃತಿರತ್ನ 'ತಿರುಪಲ್ಲಾಂಡು' ಎಂಬ ಹೆಸರಿನಿಂದ ತಮಿಳು ಭಕ್ತಿಸಾಹಿತ್ಯದಲ್ಲಿ ಅತ್ಯಂತ ಶ್ರೇಷ್ಠ ಗ್ರಂಥವಾಗಿದ್ದು ಭಗವಂತನ ನಿತ್ಯಪೂಜೆಯಲ್ಲೂ ಅಳವಡಿಸಲ್ಪಟ್ಟಿದೆ.

ಇಷ್ಟೆಲ್ಲ ರಾಜಸನ್ಮಾನಿತರಾಗಿ ಒಂದು ಮೂಟೆ ಚಿನ್ನದ ನಾಣ್ಯವನ್ನು ಬಹುಮಾನವಾಗಿ ಪಡೆದರೂ ಇದಾವುದರ ವ್ಯಾಮೋಹವೂ ಇಲ್ಲದ ವಿಷ್ಣುಚಿತ್ತರು ಅಷ್ಟೂ ಹಣವನ್ನು ದೇಗುಲದ ಅಭಿವೃದ್ಧಿಗೆ ಒಪ್ಪಿಸಿಕೊಟ್ಟು, ಬರಿಗೈಯಲ್ಲಿ ಮನೆಗೆ ಹಿಂತಿರುಗಿ ಏನೂ ನಡೆದೇ ಇಲ್ಲವೆಂಬಂತೆ ಮತ್ತೆ ರಂಗನಾಥನ ಪುಷ್ಪಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಒಮ್ಮೆ ಎಂದಿನಂತೆ ನಸುಕಿನಲ್ಲಿ ಪುಷ್ಪಗಳಿಗಾಗಿ ಹೂತೋಟಕ್ಕೆ ಹೋದಾಗ ಅಲ್ಲಿ ತುಲಸೀಗಿಡಗಳ ನಡುವೆ ಮಲಗಿದ್ದ ಮುದ್ದಾದ ಹೆಣ್ಣು ಶಿಶುವೊಂದನ್ನು ಕಂಡರು. ಹೂದೋಟದ ಸೊಬಗೇ ತಾನಾದಂತಿದ್ದ ಆ ಮಗು ಇವರತ್ತ ನೋಡಿ ಕೇಕೆ ಹಾಕಿ ನಗುತ್ತಿತ್ತು. ಆ ಕಂದನ ದೈವೀ ಸೌಂದರ್ಯಕ್ಕೆ ಮಾರುಹೋದ ವಿಷ್ಣುಚಿತ್ತರು ಭಗವಂತನೇ ತಮಗೆ ಅದನ್ನು ಕೊಟ್ಟಿರುವನೆಂದು ಭಾವಿಸಿ ಮನೆಗೆ ಕರೆತಂದು ಅತ್ಯಂತ ಪ್ರೀತಿಯಿಂದ ಸಾಕತೊಡಗಿದರು. ಭಕ್ತಿಭರಿತ ವಾತಾವರಣದಲ್ಲಿ ಬೆಳೆಯುತ್ತಿದ್ದ ಆ ಮಗು ಮುಂದೆ ಗೋದಾದೇವಿ ಎಂಬ ಹೆಸರು ಪಡೆದಳು. ಶ್ರೀರಂಗನಾಥನಲ್ಲಿ ಅತೀವ ಭಕ್ತಿಯುಂಟಾಗಿ, ಆ ದೇವದೇವನನ್ನೇ ವರಿಸಬೇಕೆಂಬ ಮಹದಿಚ್ಛೆ ಅವಳಲ್ಲಿ ಉಂಟಾಯಿತು. ಶ್ರೀಮದ್ಭಾಗವತದಲ್ಲಿ ಗೋಪಿಯರು ಕೃಷ್ಣನನ್ನು ಪಡೆಯಲು ಕಾತ್ಯಾಯಿನೀ ವ್ರತವನ್ನು ಆಚರಿಸಿದಂತೆ ತಾನೂ ರಂಗನಾಥನನ್ನು ಒಲಿಸಿಕೊಳ್ಳಲು ಅದೇ ವ್ರತವನ್ನು ತನ್ನ ಗೆಳತಿಯರೊಡಗೂಡಿ ಆಚರಿಸಿದಳು. ಈ ಸಂದರ್ಭದಲ್ಲೇ ಅವಳಿಂದ ಅತ್ಯಂತ ಕಾವ್ಯಮಯವಾದ **'ತಿರುಪ್ಪಾವೈ'** ಎಂಬ ಪ್ರಬಂಧದ ರಚನೆಯಾಯಿತು. ಇವಳ ಪ್ರೇಮಭಕ್ತಿಗೆ ರಂಗನಾಥನು ಸೋತು, ವಿಷ್ಣುಚಿತ್ತರ ಬಳಿಗೆ ಬಂದು ಅವರ ಮಗಳನ್ನು ತನಗೆ ವಿವಾಹ

ಮಾಡಿಕೊಡಬೇಕೆಂದು ಕೇಳಿಕೊಂಡನು. ಭಗವಂತನಿಗೇ ಮಗಳನ್ನು ಧಾರೆಯೆರೆದು ಕೊಡುವುದಕ್ಕಿಂತ ದೊಡ್ಡ ಸೌಭಾಗ್ಯ ಯಾವ ತಂದೆಗಿದೆ? ವಿಷ್ಣುಚಿತ್ತರು ಪರಮಾನಂದಭರಿತರಾಗಿ ರಂಗನಾಥನ ಜೊತೆ ಗೋದೆಯ ವಿವಾಹವನ್ನು ಸಂಭ್ರಮದಿಂದ ನೆರವೇರಿಸಿದರು. ಹೀಗೆ ವಿಷ್ಣುಚಿತ್ತರಿಗೆ ಅಳಿಯನಾಗಿ ಬಂದ ಪರಮಾತ್ಮ ಈ ಪರಮಭಕ್ತನಿಗೆ ಪ್ರಣಾಮಗಳನ್ನು ಸಲ್ಲಿಸುತ್ತ "ನಿಮ್ಮ ಮಗಳನ್ನು ಕೊಟ್ಟು ನನಗೆ ಮಾವನೆನಿಸಿ ದೊಡ್ಡವ ರಾದುದರಿಂದ ಪೆರಿಯಾಳ್ವಾರ್ ಎಂಬ ಕೀರ್ತಿ ನಿಮ್ಮದಾಗಲಿ" ಎಂದು ಹರಸಿ ಅವರಿಂದ ಆಶೀರ್ವಾದ ಪಡೆದ.

ಇದು ಪೆರಿಯಾಳ್ವಾರರ ಪವಿತ್ರ ಜೀವನದ ಸಂಕ್ಷಿಪ್ತ ಪರಿಚಯ. ಇನ್ನು ಅವರ ಅತಿ ಮುಖ್ಯ ಕೃತಿ '**ತಿರುವಾಯ್ಮೊಳಿ**'ಯ ಪ್ರಮುಖವಾದ ಅಂಶಗಳನ್ನು ತಿಳಿಸಲಾಗಿದೆ:

'ಪೆರಿಯಾಳ್ವಾರ್ ತಿರುವಾಯ್ಮೊಳಿ' ಎಂಬ ತಮಿಳು ಭಾಷೆಯಲ್ಲಿರುವ ಈ ಸಾಹಿತ್ಯರತ್ನದಲ್ಲಿ ಭಕ್ತಶ್ರೇಷ್ಠರಾದ ಶ್ರೀ ವಿಷ್ಣುಚಿತ್ತರು ಭಗವಂತನನ್ನು ವಾತ್ಸಲ್ಯಭಾವದಿಂದ ಕಂಡು ಹತ್ತು ಪರ್ವಗಳಲ್ಲಿ ೪೬೧ ಪಾಶುರಗಳಲ್ಲಿ ಹಾಡಿದ್ದಾರೆ. ಇಂತಹ ಸಾಹಿತ್ಯವನ್ನು 'ಪಿಳ್ಳೈ ತಮಿಳ್' ಎಂದು ಕರೆಯುತ್ತಾರೆ. ಈ ಪಿಳ್ಳೈ ತಮಿಳ್ ಸಾಹಿತ್ಯ ಕೆಳಕಂಡ ವಿವರಗಳನ್ನು ಹೊಂದಿರುತ್ತದೆ:

೧. **ಕಾಪ್ಪು:** ತಾನು ಉದ್ದೇಶಿಸಿ ಹಾಡುತ್ತಿರುವ ಶಿಶುರೂಪಿ ಭಗವಂತನ ಸಂಪೂರ್ಣ ರಕ್ಷಣೆಗಾಗಿ ಭಕ್ತನಾದ ಕವಿಯು ಮನಸಾರೆ ಹರಸುವನು. ಆ ಕಂದನ ಶ್ರೀರಕ್ಷೆಗಾಗಿ ಇತರ ದೇವತೆಗಳಲ್ಲಿ ಪ್ರಾರ್ಥಿಸುತ್ತಾನೆ.

೨. **ಶೆಂಗೀರೈ:** ಶೀರೈ ಎಂದರೆ ಆಡುವುದು, ಮಗುವನ್ನು ಮಡಿಲಲ್ಲಿ ಅಥವಾ ಬೆನ್ನಿನ ಮೇಲೆ ಕೂಡಿಸಿಕೊಂಡು ಆಡಿಸುತ್ತ ಮುದ್ದು ಮಾಡುವುದು.

೩. **ತಾಲ್:** ತಾಲಾಟ್ಟು ಎಂದರೆ ಮಗುವಿನ ಸುಖನಿದ್ರೆಗಾಗಿ ಲಾಲಿಹಾಡುಗಳನ್ನು ಹಾಡುತ್ತಾ ತೂಗುವುದು.

೪. **ಶೆಪ್ಪಾಣಿ:** ಮಗುವನ್ನು ಕುಳ್ಳಿರಿಸಿಕೊಂಡು ಅದರ ಪುಟ್ಟ ಕೈಗಳಿಂದ ಚಪ್ಪಾಳೆ ಹೊಡೆಸುತ್ತ, ಹಾಡುತ್ತ ಆಡಿಸುವುದು.

೫. **ಮುತ್ತಂ:** ಮಗುವನ್ನು ಮುದ್ದಿಸುತ್ತ ಅದರಿಂದಲೂ ಮುದ್ದಿಸಿಕೊಳ್ಳುತ್ತ ಹಾಡುವುದು.

೬. **ವಾರಾನೈ:** ಅಂಬೆಗಾಲು ಹಾಕಲು ಕಲಿಯುತ್ತಿರುವ ಶಿಶುವನ್ನು, ತಾನು ಸ್ವಲ್ಪ ದೂರದಲ್ಲಿ ನಿಂತು 'ನನ್ನ ಹತ್ತಿರ ಬಾ' ಎಂದು ಪರಿಪರಿಯಾಗಿ ಹಾಡುತ್ತ ಕರೆಯುವುದು.

೭. **ಅಂಬುಲಿ:** ಅಳುತ್ತಿರುವ ಕಂದನಿಗೆ ಚಂದಮಾಮನನ್ನು ತೋರಿಸುತ್ತಾ ಆ ಚಂದ್ರನನ್ನು ಶಿಶುವಿನ ಬಳಿ ಬರಲು ಅನೇಕ ಉಪಾಯಗಳಿಂದ ಕರೆಯುವುದು.

೮. **ಶಿರುಪರೈ:** ಮಗುವನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು ಅದರ ಕೈಯಲ್ಲಿ ಚಿಕ್ಕ ತಮ್ಮಟೆಯನ್ನು ಕೊಟ್ಟು, ಅದರ ಕೈಗಳಿಂದಲೇ ಬಾರಿಸುತ್ತ ಹಾಡುವುದು.

೯. **ಶಿಟ್ರಿಲ್:** ಹೆಣ್ಣುಮಕ್ಕಳು ಮರಳುಗೂಡುಗಳನ್ನು ಕಟ್ಟಿ ಆಟವಾಡುತ್ತಿರುವಾಗ, ಆ ಗೂಡುಗಳನ್ನು ಒಡೆದುಹಾಕಿ, ಚೇಷ್ಟೆ ಮಾಡುವ ಶಿಶುವಿನ ವರ್ಣನೆ ಮಾಡುವುದು.

೧೦. **ಶಿರುತೇರ್:** ಚಿಕ್ಕ ಬಂಡಿಯನ್ನು ಕಟ್ಟಿ ಎಳೆಯುತ್ತ, ಆಡುತ್ತಿರುವ ಶಿಶುವಿನ ವರ್ಣನೆ ಮಾಡುವುದು.

ಈ ಎಲ್ಲ ಲಕ್ಷಣಗಳನ್ನು ಒಳಗೊಂಡಿರುವ ಪಿಳ್ಳೈ ತಮಿಳ್ ಸಾಹಿತ್ಯದ ಪ್ರಪ್ರಥಮ ಹಾಗೂ ಉತ್ತಮ ಕೃತಿ ಪೆರಿಯಾಳ್ವಾರ್ ತಿರುವಾಯ್ಮೊಳಿ ಎಂದು ಪಂಡಿತರಿಂದ ಪರಿಗಣಿಸಲ್ಪಟ್ಟಿದೆ. ಪೆರಿಯಾಳ್ವಾರರು ತಮ್ಮ ತಿರುವಾಯ್ಮೊಳಿಯ ಮೊದಲ ಹತ್ತು ಪಾಶುರಗಳಲ್ಲಿ ನಂದಗೋಕುಲದಲ್ಲಿ ಶ್ರೀಕೃಷ್ಣನು ಅವತರಿಸಿದ ಸನ್ನಿವೇಶದಲ್ಲಿ ನಡೆದ ಸಂತಸ ಸಮಾರಂಭವನ್ನು ಸಾಕ್ಷಾತ್ತಾಗಿ ಅನುಭವಿಸುತ್ತ ಹಾಡುತ್ತಾರೆ. ಎರಡನೆಯ ತಿರುವಾಯ್ಮೊಳಿಯಲ್ಲಿ ಯಶೋದಾದೇವಿಯು ಶ್ರೀಕೃಷ್ಣನ ಸೌಂದರ್ಯವನ್ನು ಕಂಡು ಹಿಗ್ಗಿ, ಆ ಆನಂದವನ್ನು ತನ್ನಲ್ಲಿ ಅಡಗಿಸಿಕೊಳ್ಳಲಾಗದೆ, ಆ ಕೃಷ್ಣಕಿಶೋರನ ಪಾದಾದಿ ಕೇಶಾಂತದವರೆಗಿನ ದಿವ್ಯವಾದ ಅವಯವಗಳ ಲಕ್ಷಣಗಳನ್ನು ತಾನೂ ಅನುಭವಿಸುತ್ತ ಇತರ ಗೋಪಸ್ತ್ರೀಯರಿಗೂ ತೋರಿಸಿದ ಕ್ರಮವನ್ನು ಆಳ್ವಾರರು ಬಣ್ಣಿಸುತ್ತಾರೆ. ಮೂರನೆಯ ತಿರುವಾಯ್ಮೊಳಿಯಲ್ಲಿ ಶ್ರೀಕೃಷ್ಣನನ್ನು ಯಶೋದಾದೇವಿಯು ತೊಟ್ಟಿಲಲ್ಲಿ ಮಲಗಿಸಿ, ಅವನು ಸುಖವಾಗಿ ನಿದ್ರಿಸಲು ಲಾಲಿಹಾಡುಗಳನ್ನು ಹಾಡಿದ ಕ್ರಮವನ್ನು ತಾವೂ ಯಶೋದಾಭಾವದಿಂದಲೇ ಕೂಡಿದವರಾಗಿ ಹಾಡಿ, ಮಾತೃವಾತ್ಸಲ್ಯದಿಂದುಕ್ಕಿದ ಆನಂದವನ್ನು ತಾವೂ ಅನುಭವಿಸುತ್ತಾರೆ. ನಾಲ್ಕನೆಯ ತಿರುವಾಯ್ಮೊಳಿಯಲ್ಲಿ ಯಶೋದೆ ಬಾಲಕೃಷ್ಣನನ್ನು ತನ್ನ ಸೊಂಟದಲ್ಲೆತ್ತಿಕೊಂಡು, ಅವನಿಗೆ ಚಂದ್ರನನ್ನು ತೋರಿಸುತ್ತ, ಬಾಲಲೀಲೆಗನುಗುಣವಾಗಿ ಮಗುವಿನ ಬಳಿಗೆ ಬರುವಂತೆ ಚಂದ್ರನನ್ನೇ ಕರೆಯುತ್ತಾ, ಭಕ್ತಿತುಂಬಿ ಹಾಡುತ್ತಾಳೆ. ಐದನೆಯ ತಿರುವಾಯ್ಮೊಳಿಯಲ್ಲಿ ಯಶೋದೆ ಕೃಷ್ಣನನ್ನು ಕುರಿತು ತನ್ನ ಹಾಡು ಮತ್ತು ತಾಳಕ್ಕೆ ಅನುಗುಣವಾಗಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ 'ಬಾಲ್ಯಸಹಜ ನರ್ತನ' ಮಾಡಲು ಕೇಳಿಕೊಳ್ಳುತ್ತಾಳೆ.

ಆರನೆಯ ತಿರುವಾಯ್ಮೊಳಿಯಲ್ಲಿ ಕೃಷ್ಣನನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು ಹಾಡುತ್ತ, ಅವನ ಪುಟ್ಟ ಕೈಗಳೆರಡನ್ನು ತಟ್ಟುತ್ತ, ಚಪ್ಪಾಳೆ ಹೊಡೆಸುವ ಪ್ರಕರಣವನ್ನು ಅತ್ಯಂತ ಸುಂದರವಾಗಿ ಮೂಡಿಸಿದ್ದಾರೆ. ಏಳನೆಯ ತಿರುವಾಯ್ಮೊಳಿಯಲ್ಲಿ ಶ್ರೀವಿಷ್ಣುಚಿತ್ತರು ಒಂದು ಹೆಜ್ಜೆಯಲ್ಲಿ ಶಂಖದ ಗುರುತನ್ನೂ ಮತ್ತೊಂದು

ಹೆಜ್ಜೆಯಲ್ಲಿ ಚಕ್ರದ ಗುರುತನ್ನೂ ಮೂಡಿಸುತ್ತ ತಪ್ಪುತಪ್ಪಾಗಿ ಹೆಜ್ಜೆಗಳನ್ನಿಡುತ್ತ, ಏಳುತ್ತ, ಬೀಳುತ್ತ ನಡೆಯುವ ಕೃಷ್ಣನನ್ನು ತನ್ನ ಹತ್ತಿರ ಬರಬೇಕೆಂದು ಪರಿಪರಿಯಾಗಿ ಕರೆಯುವ ಯಶೋದೆಯ ಪರಿಯನ್ನು ಅನುಕರಿಸಿ ಪದ್ಯರೂಪದಲ್ಲಿ ಹಾಡಿ ಅನುಭವಿಸುತ್ತಾರೆ. ಎಂಟನೆಯ ತಿರುವಾಯ್ಮೊಳಿಯಲ್ಲಿ ತನ್ನ ವಿಷಯದಲ್ಲಿ ಭಕ್ತಿ ಮಾಡುವವರು ತನ್ನನ್ನೇ ಸೇರಬೇಕೆಂದು ಇಚ್ಛಿಸುವ ಶ್ರೀಮನ್ನಾರಾಯಣನನ್ನು ಯಶೋದೆ "ಕಂದ ಓಡಿಬಂದು ನನ್ನನ್ನು ಅಪ್ಪಿಕೋ" ಎಂದು ಪರಿಪರಿಯಾಗಿ ಬೇಡುವ ರೀತಿಯನ್ನು ಕಾಣುತ್ತೇವೆ. ಭಕ್ತಪರಾಧೀನನಾದ ಭಗವಂತನು ಭಕ್ತನ ಕರೆಗೆ ಓಗೊಟ್ಟು ಓಡಿಬಂದು ಅವನನ್ನು ಆಲಿಂಗಿಸಿ ಸಂಪೂರ್ಣವಾಗಿ ತನ್ನವನನ್ನಾಗಿ ಮಾಡಿಕೊಳ್ಳುತ್ತಾನೆ. ಒಂಭತ್ತನೆಯ ತಿರುವಾಯ್ಮೊಳಿಯಲ್ಲಿ ಬಾಲಕೃಷ್ಣನು ಅನೇಕ ವಿಧವಾದ ಆಭರಣಗಳನ್ನು ಧರಿಸಿಕೊಂಡು ತನ್ನ ಕೊಳಲಿನಲ್ಲಿ ರಾಗಗಳನ್ನು ನುಡಿಸುತ್ತ ಚಾತುರ್ಯದಿಂದ ನಡೆದುಬಂದು, ತನ್ನನ್ನು ಹಿಂದಿನಿಂದ ಅಪ್ಪಿಕೊಂಡಾಗ ಆದ ಸ್ಪರ್ಶಸುಖವನ್ನು ಅನುಭವಿಸಿದ ಯಶೋದೆಯ ಆನಂದವನ್ನು ತಾವೂ ಅನುಭವಿಸಿ ಹಾಡುತ್ತಾರೆ. ಹತ್ತನೆಯ ತಿರುವಾಯ್ಮೊಳಿಯಲ್ಲಿ ಶ್ರೀಕೃಷ್ಣನು ತನ್ನ ತಾಯಿಯಾದ ಯಶೋದೆಗೆ ಹುಳು ಹುಪ್ಪಡಿಗಳನ್ನು ತೋರಿಸುತ್ತ ಆಟವಾಡಿದುದನ್ನು ಹಾಗೂ ಯಶೋದೆ ಆನಂದದಿಂದ ಅದನ್ನು ಹೇಳಿಕೊಂಡ ಪರಿಯನ್ನು ಆಳ್ವಾರರು ತಾವೂ ಅನುಭವಿಸುತ್ತ ಹಾಡುತ್ತಾರೆ. ಅನಂತರ ಯಶೋದೆ, ಕೃಷ್ಣನಿಗೆ ಕಿವಿ ಚುಚ್ಚಿಸಿಕೊಂಡು ಮಕರಕುಂಡಲಗಳನ್ನು ಧರಿಸಲು ಕರೆಯುತ್ತಾಳೆ.

ಅಲ್ಲಿಂದ ಮುಂದಿನ ಹತ್ತು ಪದ್ಯಗಳಲ್ಲಿ ಯಶೋದೆ ಕೃಷ್ಣನನ್ನು ಅಭ್ಯಂಜನ ಸ್ನಾನ ಮಾಡಿಸಿಕೊಳ್ಳಲು ತನ್ನಲ್ಲಿಗೆ ಬರಬೇಕೆಂದು ನಾನಾ ಪ್ರಕಾರವಾಗಿ ಕರೆಯುವುದನ್ನು ಪೆರಿಯಾಳ್ವಾರರು ತದ್ಭಾವಯುಕ್ತರಾಗಿ 'ನೀರಾಟ್ಟಂ' ಎಂಬ ಶೀರ್ಷಿಕೆಯಲ್ಲಿ ಹಾಡಿದ್ದಾರೆ. ಅತ್ಯಂತ ಮಹಿಮೆಯಿಂದ ಕೂಡಿರುವ ಈ ಪದ್ಯಗಳನ್ನು ಭಗವದಾರಾಧನ ಸಮಯದಲ್ಲಿ ಮನೆಯಲ್ಲೂ, ದೇವಾಲಯದಲ್ಲೂ ಅಭಿಷೇಕ ಮಾಡುವಾಗ ಅನುಸಂಧಾನ ಮಾಡುವ ಕ್ರಮವನ್ನು ಭಕ್ತರು ಈಗಲೂ ಅಳವಡಿಸಿಕೊಂಡಿದ್ದಾರೆ.

ಪುಟ್ಟ ಮಗುವಿನ ತಲೆಗೂದಲು ಬಾಚುವಾಗ ಕಾಗೆ, ಗುಬ್ಬಿಗಳನ್ನು ಕರೆಯುವಂತೆ ಯಶೋದೆ ಕೃಷ್ಣನ ದುಂಬಿಯಂತಹ ಚೆಲುವಿನ ಕಪ್ಪುಕೂದಲನ್ನು ಬಾಚಲು ನಾನಾ ಉಪಾಯಗಳನ್ನು ಮಾಡುತ್ತಾಳೆ. ಅನಂತರ ನಾನಾ ವಿಧವಾದ ಪುಷ್ಪಗಳನ್ನು ಕೈಯಲ್ಲಿಟ್ಟುಕೊಂಡು ಅವುಗಳನ್ನು ಮುಡಿಸಿಕೊಳ್ಳಲು ಪರಿಪರಿಯಾಗಿ ಕರೆಯುತ್ತಾಳೆ. ಆಳ್ವಾರರ ಈ ಅತ್ಯದ್ಭುತ ಪ್ರಬಂಧಗಳು ಮನೆಗಳಲ್ಲೂ, ದೇವಾಲಯಗಳಲ್ಲೂ ನಿತ್ಯ ಪೂಜೆಯ ಮಂತ್ರಗಳಾಗಿವೆ. ಕೃಷ್ಣನ ಎಲ್ಲ ಅಲಂಕಾರಗಳೂ ಪೂರ್ಣವಾದ ಮೇಲೆ ಅವನಿಗೆ ಕೆಟ್ಟ ದೃಷ್ಟಿ ಬೀಳಬಾರದೆಂದು, ದೃಷ್ಟಿದೋಷ ಪರಿಹಾರಾರ್ಥವಾಗಿ ರಕ್ಷೆಯನ್ನಿಡುವ ಸಲುವಾಗಿ, ಸಂಧ್ಯಾದೀಪವನ್ನು ಹಚ್ಚಿ ಆ ಸುಂದರವದನಕ್ಕೆ ರಕ್ಷೆ ಇಡುವ ಪ್ರಸಂಗ ರಮಣೀಯವಾದುದು. ಇಂತಹುದೇ ಅನುಭವವು ಆಳ್ವಾರರಿಗೆ ತಿರುವಳ್ಳಿರೈ ಎಂಬ ಕ್ಷೇತ್ರದಲ್ಲಾಯಿತು. ಈ ಸಂಬಂಧದ ಹತ್ತು ಪದ್ಯಗಳನ್ನು ದೇವರ ಪೂಜೆಯಲ್ಲಿ ಇಂದಿಗೂ ಅನುಸಂಧಾನ ಮಾಡುತ್ತಾರೆ.

ಇದರ ನಂತರ ಭಾಗವತದ ಗೋವರ್ಧನಗಿರಿಯ ಪ್ರಸಂಗ. ತನಗೆ ಅತ್ಯಂತ ಪ್ರಿಯರಾದ ಗೋಪಬಾಲರಿಗೂ ಗೋಸಮೂಹಕ್ಕೂ ಬಾಧಕವಾಗುವಂತೆ ಇಂದ್ರನು ಕಲ್ಲಿನ ಮಳೆಗರೆದಾಗ, ಅವನ ಗರ್ವಭಂಗ ಮಾಡಲು ಗೋವರ್ಧನಗಿರಿಯನ್ನೇ ಸತತ ಏಳು ದಿನಗಳ ಕಾಲ ಎತ್ತಿ ಹಿಡಿದು ಸ್ವಲ್ಪವೂ ಆಯಾಸ ಪಡದೆ 'ಆಪತ್ಸಖ' ಎಂದು ಕೀರ್ತಿಸಲ್ಪಟ್ಟ ಕೃಷ್ಣನ ಲೀಲಾವಿನೋದವನ್ನು ಹೃದಯಂಗಮವಾಗಿ ಹಾಡುತ್ತಾರೆ. ಶ್ರೀ ಪೆರಿಯಾಳ್ವಾರರು. ಶ್ರೀಕೃಷ್ಣನು ತನ್ನ ದಿವ್ಯವಾದ ವೇಣುಗಾನದಿಂದ ಮೂರು ಲೋಕಗಳನ್ನೂ ಮೋಹಕ್ಕೊಳಪಡಿಸಿ ಪರವಶವನ್ನಾಗಿಸಿದ ಪ್ರಕರಣವನ್ನು ಅತ್ಯಾಶ್ಚರ್ಯವಾಗಿ ಅನುಭವಿಸಿ ಹಾಡಿದ್ದಾರೆ. ತನಗೆ ಪ್ರತಿಕೂಲರಾದವರು ಅಳಿಯುವಂತೆಯೂ ಅನುಕೂಲರಾದವರು ಬಾಳುವಂತೆಯೂ ಪಾಂಚಜನ್ಯವೆಂಬ ಶಂಖವನ್ನು ಊದುವ ಶ್ರಿಯಃಪತಿ ಶ್ರೀಕೃಷ್ಣ, ತನ್ನನ್ನು ಆಶ್ರಯಿಸಿ ಬಂದವರನ್ನು ಹಿತವಾದ ನುಡಿಗಳಿಂದಲೂ, ವೇಣುಗಾನದಿಂದಲೂ ಹರಸುತ್ತಾನೆ.

ಇಲ್ಲಿಂದ ಮುಂದಿನ ಪಾಶುರಗಳಲ್ಲಿ ಗೋಪಿಕಾಸ್ತ್ರೀಯರೊಡನೆ ಶ್ರೀಕೃಷ್ಣಲೀಲೆ, ರಾಮಾವತಾರದ ವೈಶಿಷ್ಟ್ಯ, ದಿವ್ಯಕ್ಷೇತ್ರಗಳ ವರ್ಣನೆ ಮುಂದುವರೆಯುತ್ತದೆ. ಅನಂತರದ ದಶಕದಲ್ಲಿ ಭಗವಂತನ ದಾಸರ ದಾಸರಲ್ಲದವರ ನಡವಳಿಕೆಗಳನ್ನು, ಭಗವಂತನಿಗೂ ಜೀವನಿಗೂ ಇರುವ ಸಂಬಂಧದ ಜ್ಞಾನವಿಲ್ಲದ ಸಂಸಾರಿಗಳ ತೊಳಲಾಟವನ್ನು ವರ್ಣಿಸುತ್ತ, ಅಂತಹವರು ಕಡೆಯ ಪಕ್ಷ ತಮ್ಮ ಅಂತಿಮ ಕಾಲದಲ್ಲಾದರೂ ಭಗವಂತನನ್ನು ಆಶ್ರಯಿಸಿದರೆ ಮತ್ತೆ ಈ ಸಂಸಾರಸಾಗರದಲ್ಲಿ ಮುಳುಗದಂತೆ ಉಜ್ಜೀವನ ನಡೆಸಬಹುದು ಎನ್ನುತ್ತಾರೆ. ಭಗವದ್ವಿಮುಖರಾಗಿರುವವರಿಗೆ ಅಂತಿಮ ಕಾಲದಲ್ಲಿ ಬರುವ ಕ್ಲೇಶಪರಂಪರೆಗಳನ್ನು ವಿವರಿಸಿ ಎಚ್ಚರಿಸುತ್ತಾರೆ. ಆದ್ದರಿಂದ ಭಗವಂತನನ್ನು ಆಶ್ರಯಿಸಿ ಯಮದೂತರ ದಂಡನೆಗಳಿಂದ ತಪ್ಪಿಸಿಕೊಂಡು, ಊರ್ಧ್ವಗತಿಯಲ್ಲಿ ಸಾಗಿ, ಶ್ರೀವೈಕುಂಠವನ್ನು ಸೇರಿ, ಪರಮಾತ್ಮನ ಕೈಂಕರ್ಯ ಮಾಡುತ್ತ, ನಿರಂತರ ಆನಂದವನ್ನು ಪಡೆಯ

ಬಹುದೆಂಬ ಮಹತ್ತಾದ ವಿಷಯವನ್ನು ಮಾನವರ ಮನಸ್ಸಿಗೆ ನಾಟುವಂತೆ ಉಪದೇಶಿಸುತ್ತಾರೆ.

ಮುಂದೆ, ದುರ್ಲಭವಾದ ಮಾನವಜನ್ಮ ದೊರೆತಿರುವಾಗ, ತಮ್ಮ ತಮ್ಮ ಮಕ್ಕಳಿಗೆ ಭಗವಂತನ ನಾಮಗಳನ್ನೇ ಹೆಸರಾಗಿಡ ಬೇಕೆಂದೂ, ಆಗ ಆ ಮಾತಾಪಿತೃಗಳಿಗೆ ನರಕದುಃಖವು ಎಂದೂ ಸಂಭವಿಸುವುದಿಲ್ಲವೆಂದೂ ಹೇಳುತ್ತಾರೆ. ಏಕೆಂದರೆ ಆ ಮಕ್ಕಳನ್ನು ಕರೆಯುವಾಗ ಭಗವನ್ನಾಮಸ್ಮರಣೆಯೇ ಆಗುವುದರಿಂದ ತಂದೆತಾಯಿಯರಿಗೆ ಸದ್ಗತಿ ಪ್ರಾಪ್ತವಾಗುವುದು ಎನ್ನುತ್ತಾರೆ.

ಕೊನೆಯ ದಶಕಗಳಲ್ಲಿ ಆಳ್ವಾರರಿಗೂ ಭಗವಂತನಿಗೂ ಈ ಕೆಳಕಂಡಂತೆ ಸಂಭಾಷಣೆಯಾಗುತ್ತದೆ:

**ಆಳ್ವಾರ್:** ಎಲೈ ಪರಮಾತ್ಮನೇ ಆಶ್ರಿತರನ್ನು ರಕ್ಷಿಸುವ ಸಾಮರ್ಥ್ಯವುಳ್ಳ ನಿನ್ನನ್ನು ನಾನು ಆಶ್ರಯಿಸುವುದೇಕೆಂದರೆ ದೇಹಾವಸಾನ ಕಾಲದಲ್ಲಿ ಇಂದ್ರಿಯಗಳೆಲ್ಲವೂ ಬಲ ಹೀನವಾಗಿ ಸೋತು ಹೋಗುವ ಸಮಯದಲ್ಲಿ ನೀನು ನನ್ನೊಡನೆ ಇದ್ದು ನನ್ನನ್ನು ರಕ್ಷಿಸುವೆ ಎಂದು.

**ಭಗವಂತ:** ಈ ರೀತಿ ನಾನು ರಕ್ಷಿಸುವುದು ಕೇವಲ ನಿಷ್ಠಾವಂತ ಪ್ರಪನ್ನರನ್ನು ಮಾತ್ರ, ಆದುದರಿಂದ ಕೇಳಿಕೊಳ್ಳಿ, ನೀವೂ ಅಂತಹವರೇ?

**ಆಳ್ವಾರ್:** ಅಂತಹ ನಿಷ್ಠಾವಂತ ಪ್ರಪನ್ನರನ್ನು ನಾನು ಹೋಲುವುದಿಲ್ಲ. ಆದರೂ ನಿನ್ನನ್ನೇ ಸಂಪೂರ್ಣವಾಗಿ ಶರಣು ಹೋಗಿದ್ದೇನೆ.

**ಭಗವಂತ:** ಹಾಗಾದರೆ ನಿಷ್ಠಾವಂತನಲ್ಲದ ಯಾರನ್ನು ನಾನು ರಕ್ಷಿಸಿದುದನ್ನು ಕಂಡು ನೀವು ನನ್ನನ್ನು ಆಶ್ರಯಿಸಿದಿರಿ?

**ಆಳ್ವಾರ್:** ಗಜೇಂದ್ರನೆಂಬ ಆನೆಗೆ ನೀವು ಕೃಪೆ ತೋರಿ ದುದನ್ನು ಕಂಡು ಆಶ್ರಯಿಸಿದೆ!

**ಭಗವಂತ:** ಹಾಗಾದರೆ, ವಿಪತ್ತು ಬಂದಾಗ ಕೂಗಿಟ್ಟ ಗಜೇಂದ್ರನಂತೆಯೇ ನಿಮ್ಮ ಇಂದ್ರಿಯಗಳು ಸೋತುಹೋದಾಗ ನನ್ನನ್ನು ಕೂಗಿ ಕರೆಯಿರಿ. ಆಗ ಬಂದು ರಕ್ಷಿಸುತ್ತೇನೆ.

**ಆಳ್ವಾರರು:** ಮೃತ್ಯುವು ಬಂದು ನನ್ನನ್ನು ಹಿಂಸಿಸುವ ಸಮಯದಲ್ಲಿ ನಾನು ಯಾವ ರೀತಿಯಲ್ಲಿಯೂ ನಿನ್ನನ್ನು ಸ್ಮರಿಸಿಕೊಳ್ಳಲಾರೆ.

**ಭಗವಂತ:** ಆದರೆ ನೀವು ಮಾಡುವುದಾದರೂ ಏನು?

**ಆಳ್ವಾರ್:** ಅವಸಾನಕಾಲ ಸಮೀಪ ಬಂದಾಗ ನಿನ್ನನ್ನು ಸ್ಮರಿಸಲು ಸಾಧ್ಯವಾಗದ ಕಾರಣ, ಈ ಕರಣ ಕಳೇಬರಗಳು ವ್ಯವಸ್ಥಿತವಾಗಿರುವ ಸಮಯದಲ್ಲಿಯೇ ಆಪತ್ಕಾಲದಲ್ಲಿ ಬಂದು ರಕ್ಷಿಸು ಎಂದು ಪೂರ್ವಭಾವಿಯಾಗಿ ಈಗಲೇ ವಿಜ್ಞಾಪಿಸಿಕೊಳ್ಳುತ್ತೇನೆ.

**ಭಗವಂತ:** ನಿಮ್ಮನ್ನು ರಕ್ಷಿಸಲೇಬೇಕೆಂಬ ನಿರ್ಬಂಧವುಂಟೇ?

**ಆಳ್ವಾರ್:** ಆಶ್ರಿತರನ್ನು ರಕ್ಷಿಸುವುದೇ ನಿಮ್ಮ ಮತವಲ್ಲವೇ?

**ಭಗವಂತ:** ಹೌದು, ಶರಣಾಗತರನ್ನು ಎಂದಿಗೂ ಕೈಬಿಡು ವುದಿಲ್ಲ. ಭಯ ಪಡಬೇಡಿ. ನಾನು ನಿಮ್ಮನ್ನು ರಕ್ಷಿಸುತ್ತೇನೆ.

ಆಳ್ವಾರರು ನಿರಂತರವಾಗಿ ತಮ್ಮ ಹೃತ್ಕಮಲದಲ್ಲಿ ಪರಮಾತ್ಮನನ್ನು ಉಪಾಸನೆ ಮಾಡುತ್ತ ಅವನ ಕೈಂಕರ್ಯವನ್ನು ಮಾಡುತ್ತಿರುವುದರಿಂದ ತಮ್ಮ ದೇಹವು ಬ್ರಹ್ಮಪುರ ವಾಗಿದೆಯೆಂದೂ, ಅದರಲ್ಲಿರುವ ಹೃದಯವೇ ಪರಮಾತ್ಮ ನಿರುವ ಮನೆಯೆಂದೂ, ಶರಣಾಗತಿ ಹೊಂದಿದ ನಂತರ ಪರಮಾತ್ಮನ ರಕ್ಷಣೆಗೆ ಒಳಪಟ್ಟಿರುವುದರಿಂದ ಅವನ ಕೈಂಕರ್ಯಕ್ಕೆ ಧಕ್ಕೆ ತರುವ ಆಧಿವ್ಯಾಧಿಗಳು ಹತ್ತಿರವೂ ಸುಳಿದಾಡುವುದಿಲ್ಲ ವೆಂದು ಅದ್ಭುತ ಶ್ರದ್ಧೆಯಿಂದ ಬಣ್ಣಿಸುತ್ತಾರೆ. ಹೃದಯದಲ್ಲಿರುವ ಈ ಅಂತರ್ಯಾಮಿಯನ್ನೇ ತೈತ್ತಿರೀಯ ಸಂಹಿತೆಯು

**ದಹರಂ ವಿಪಾಪ್ಮಂ ಪರಮೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯ ಸಗ್ಂಸ್ಥಮ್**

ಎಂದೂ,

ಛಾಂದೋಗ್ಯೋಪನಿಷತ್

**ಏತತ್ ಸತ್ಯಂ ಬ್ರಹ್ಮಪುರಂ ಅಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ**

ಎಂದೂ ಕೊಂಡಾಡುತ್ತದೆ.

ಮಾತ್ರವಲ್ಲ, ಶ್ರೀಮನ್ನಾರಾಯಣನಲ್ಲಿ ಶರಣಾಗತಿಯನ್ನು ಮಾಡಿದವನು ಯಮನ ಅಧಿಪತ್ಯಕ್ಕೂ ಒಳಗಾಗುವುದಿಲ್ಲ. ಇದನ್ನು ವಿಷ್ಣುಪುರಾಣದಲ್ಲಿ ಸಾಕ್ಷಾತ್ ಯಮದೇವನೇ ತನ್ನ ಕಿಂಕರರನ್ನು ಕುರಿತು ಈ ರೀತಿ ಹೇಳುತ್ತಾನೆ:

**ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ ವದತಿ**
**ಯಮಃ ಕಿಲ ತಸ್ಯ ಕರ್ಣಮೂಲೇ ।**
**ಪರಿಹರ ಮಧುಸೂದನ ಪ್ರಪನ್ನಾನ್ ಪ್ರಭುರಹಂ**
**ಅನ್ಯನೃಣಾಂ ನ ವೈಷ್ಣವಾನಾಂ ॥**

(ವಿಷ್ಣುಪುರಾಣ, ೩.೧೪.೭)

ಪಾಶವನ್ನು ಕೈಯಲ್ಲಿ ಹಿಡಿದು ನಿಂತಿರುವ ತನ್ನ ಸೇವಕ ರನ್ನು ಕುರಿತು ಯಮನು ಅವರ ಕಿವಿಯಲ್ಲಿ ಗುಟ್ಟಾಗಿ ಹೇಳು ತ್ತಾನೆ: 'ನಾರಾಯಣನಲ್ಲಿ ಶರಣಾಗತಿಯನ್ನು ಮಾಡಿರು ವವರನ್ನು ಬಿಟ್ಟುಬಿಡಿ. ವಿಷ್ಣುಭಕ್ತರಿಗೆ ನಾನು ಪ್ರಭುವಲ್ಲ.ಇತರರಿಗೆ ಮಾತ್ರ ಪ್ರಭುವಾಗಿದ್ದೇನೆ.' ಆದ್ದರಿಂದ ಪ್ರಪನ್ನರ ವಿಷಯದಲ್ಲಿ ಯಮಭಟರೇ ಭಯಪಡುವಾಗ ಇನ್ನು ಆಧಿವ್ಯಾಧಿಗಳು ಹತ್ತಿರ ಸುಳಿಯಲು ಸಾಧ್ಯವೇ? ಎಂದು ವಿಷ್ಣುಚಿತ್ತರು ಪ್ರಶ್ನಿಸುತ್ತಾರೆ.

ಶ್ರೀ ತ್ಯಾಗರಾಜರು ತಮ್ಮ "ಭಜನಪರುಲಕೇಲ ದಂಡಪಾಣಿ ಭಯಮು" ಎಂಬ ಕೀರ್ತನೆಯಲ್ಲಿ ಸದಾ ಭಗವಂತನನ್ನು ಭಜಿಸಿ ಪೂಜಿಸುವ ಭಕ್ತರಿಗೆ ಯಮನ ಭಯವಿಲ್ಲ, ಜಡಚೇತನ ಜೀವಕೋಟಿ ಎಲ್ಲವೂ ಶ್ರೀರಾಮನ ದಿವ್ಯತತ್ತ್ವದ ಮೇಲೆ ನಿಂತಿದೆ, ನಿಷ್ಕಾಮ ಸಾಧಕನಾದವನು ಶ್ರೀರಾಮನ ದಿವ್ಯಮುಖ ವನ್ನು ತನ್ನ ಹೃದಯಪದ್ಮದಲ್ಲಿ ದರ್ಶನ ಮಾಡುತ್ತಾನೆ ಎಂದಿದ್ದಾರೆ.

ಪೆರಿಯಾಳ್ವಾರರು ತಮ್ಮ ಮುಂದಿನ ಪಾಶುರಗಳಲ್ಲಿ ಪರ ಮಾತ್ಮನ ಕೈಂಕರ್ಯಕ್ಕೆ ಯಾವ ವಿಧವಾದ ತೊಡಕುಗಳೂ ಉಂಟಾಗದಂತೆ ಭಗವಂತ ನೆಲೆಸಿರುವ ತಮ್ಮ ಶರೀರವನ್ನು ರಕ್ಷಿಸಲು ನಾರಾಯಣನ ಪಾಂಚಜನ್ಯ (ಶಂಖ), ಸುದರ್ಶನ (ಚಕ್ರ), ಕೌಮೋದಕೀ (ಗದೆ), ನಂದಕ (ಖಡ್ಗ) ಮತ್ತು ಶಾರ್ಙ್ಗ ವೆಂಬ(ಧನುಸ್ಸು) ಪಂಚಾಯುಧಗಳನ್ನು, ಅಷ್ಟದಿಕ್ಪಾಲಕರನ್ನು ಪ್ರಾರ್ಥಿಸುತ್ತಾರೆ. ಈ ಪಾಶುರ ಕವಚರೂಪದಲ್ಲಿದ್ದು ಪಾರಾಯಣ ಮಾಡುವವರನ್ನು ಇಂದಿಗೂ ರಕ್ಷಿಸುತ್ತಿದೆ. ಇದನ್ನು 'ಪ್ರಪನ್ನರ ಕವಚ' ಎಂದೂ ಕರೆಯುತ್ತಾರೆ.

ಶ್ರೀ ವಿಷ್ಣುಚಿತ್ತರು ತಮ್ಮ ತಿರುಮೊಳಿಯ ಕಡೆಯ ಶೆನ್ನಿಯೋಙ್ಗು ಎಂಬ ದಶಕದಲ್ಲಿ ಪರಮಾತ್ಮನ ಸಾಕ್ಷಾತ್ಕಾರ ದಿಂದ ತಾವು ಪಡೆದ ಭಾಗ್ಯವನ್ನು ಇತರರೂ ಪಡೆಯು ವಂತಾಗಲಿ ಎಂದು ಪರಮಾತ್ಮನ ದರ್ಶನಾನುಭವವನ್ನು ವಿವರವಾಗಿ ವರ್ಣಿಸುತ್ತ "ಪರಮಪುರುಷನೇ, ಸರ್ವರಕ್ಷಕನಾದ ನೀನು ಅನಾಥನಾದ ನನ್ನನ್ನು ರಕ್ಷಿಸಿದ ಮೇಲೆ ಸಂಸಾರ ಸಾಗರವು ಬತ್ತಿಹೋಯಿತು, ಆತ್ಮನಾಶಕವಾದ ಪಾಪಾಟವಿಯು ನಿನ್ನ ಕೃಪೆ ಎಂಬ ಅಗ್ನಿಯಿಂದ ದಗ್ಧವಾಯಿತು. ಜ್ಞಾನವೆಂಬ ಅಮೃತನದಿಯು ಉತ್ಕಟವಾಗಿ ಉಕ್ಕಿ ಹರಿಯುತ್ತಿದೆ. ಅಮೃತರೂಪಿಯಾದ ನಿನ್ನನ್ನು ಪೂರ್ಣವಾಗಿ ಪಾನ ಮಾಡಿದೆ. ನೀನು ನನ್ನ ಹೃದಯವನ್ನು ಹೊಕ್ಕ ಮೇಲೆ ಇನ್ನು ಎಲ್ಲಿಗೆ ಹೋಗುವೆ? ನೀನು ನನ್ನಲ್ಲಿಯೇ ಇರಬೇಕು" ಎಂದು ಭಕ್ತಿಪೂರ್ವಕವಾಗಿ ಆಗ್ರಹ ಪಡಿಸುತ್ತಾರೆ.

ಇದು ಪೆರಿಯಾಳ್ವಾರರ ಹಿರಿಮೆ, ಗರಿಮೆಗಳು ತುಂಬಿದ ಪರಮಪವಿತ್ರ ಜೀವನ ಚಿತ್ರ, ತಿರುಮೊಳಿಯ ತಿಳಿಯಾದ ಸಾಹಿತ್ಯದ ಸೌಂದರ್ಯ. ಇಂತಹ ಪೆರಿಯಾಳ್ವಾರರಿಗೆ ನಮಸ್ಕಾರ ಸಲ್ಲಿಸುವ 'ತನಿಯನ್' ಪದ್ಯದಲ್ಲಿ ಶ್ರೀಮನ್ನಾಥಮುನಿಗಳು,

**ಗುರುಮುಖಮನಧೀತ್ಯ ಪ್ರಾಪ್ಯ ವೇದಾನಶೇಷಾನ್**
**ನರಪತಿ ಪರಿಕ್ಲುಪ್ತಂ ಶುಲ್ಕಮಾದಾತು ಕಾಮಃ ।**
**ಶ್ವಶುರಮಮರವಂದ್ಯಂ ರಂಗನಾಥಸ್ಯ ಸಾಕ್ಷಾತ್**
**ದ್ವಿಜಕುಲತಿಲಕಂ ತಂ ವಿಷ್ಣುಚಿತ್ತಂ ನಮಾಮಿ ॥**

"ನರಪತಿ ಪಾಂಡ್ಯರಾಜನಿಂದ ಏರ್ಪಡಿಸಿದ್ದ ವಿದ್ಯಾಶುಲ್ಕ ವಾದ ದ್ರವ್ಯವನ್ನು ಪಡೆಯಲು ಭಗವದಾಜ್ಞಾನುಸಾರ ಇಚ್ಛಿಸಿ ಪರತತ್ತ್ವವನ್ನು ರಾಜಸಭೆಯಲ್ಲಿ ನಿರ್ಣಯ ಮಾಡಲು, ವೇದ ಗಳನ್ನು ಗುರುಮುಖೇನ ಅಧ್ಯಯನ ಮಾಡದೆಯೆ ಭಗವಂತನ ಕೃಪಾಮಾತ್ರದಿಂದಲೆ ಎಲ್ಲ ಮಂತ್ರಗಳನ್ನು ಯಾರು ಹೇಳಿದರೋ, ದೇವತೆಗಳಿಂದಲೂ ಯಾರು ವಂದನೀಯರಾದರೋ, ಸಾಕ್ಷಾತ್ ರಂಗನಾಥನಿಗೆ ಮಗಳನ್ನು ಧಾರೆಯೆರೆದು ಭಗವಂತನಿಗೆ 'ಮಾವ' ಎನಿಸಿಕೊಂಡರೋ, ಇಂತಹ ಬ್ರಾಹ್ಮಣಶ್ರೇಷ್ಠರಾದ ವಿಷ್ಣುಚಿತ್ತರನ್ನು ನಮಸ್ಕರಿಸುತ್ತೇನೆ."

## ಹಾಗಿದ್ದರೂ: ವಿಪರ್ಯಾಸದ ನಿಯಮಗಳು

(ಕೆಂಟ್ ಎಂ. ಕೀತ್)

೧. ಜನರು ಅಸಂಬದ್ಧವಾಗಿ, ವಿವೇಚನೆಯಿಲ್ಲದೆ ಸ್ವಾರ್ಥಪರರಾಗಿ ವರ್ತಿಸುತ್ತಾರೆ.
**ಹಾಗಿದ್ದರೂ ಅವರನ್ನು ಪ್ರೀತಿಸಿ.**

೨. ನೀವು ಸತ್ಕಾರ್ಯವನ್ನೇ ಮಾಡಿದರೂ ಜನ ಯಾವುದೋ ಸ್ವಾರ್ಥೋದ್ದೇಶವನ್ನು ಅದರಲ್ಲಿ ಆರೋಪಿಸುತ್ತಾರೆ.
**ಹಾಗಿದ್ದರೂ ಒಳ್ಳೆಯದನ್ನೇ ಮಾಡಿ.**

೩. ನಿಮಗೆ ಯಶಸ್ಸು ಬಂದಾಗ ಖೋಟಾ ಸ್ನೇಹಿತರು ಮತ್ತು ನಿಜವಾದ ವೈರಿಗಳು ನಿಮ್ಮ ಸುತ್ತ ಸೇರುತ್ತಾರೆ.
**ಹಾಗಿದ್ದರೂ ಯಶಸ್ವಿಯಾಗಿ.**

೪. ನೀವು ಮಾಡಿದ ಒಳ್ಳೆಯದನ್ನು ಜನರು ಮರುದಿನವೇ ಮರೆತುಬಿಡುತ್ತಾರೆ.
**ಹಾಗಿದ್ದರೂ ಒಳ್ಳೆಯದನ್ನೇ ಮಾಡಿ.**

೫. ನೀವು ಪ್ರಾಮಾಣಿಕರಾಗಿದ್ದರೆ, ಸತ್ಯವಂತರಾಗಿದ್ದರೆ ಜನ ನಿಮ್ಮನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ.
**ಹಾಗಿದ್ದರೂ ಪ್ರಾಮಾಣಿಕರಾಗಿರಿ, ಸತ್ಯವಂತರಾಗಿರಿ.**

೬. ಅತ್ಯುತ್ತಮ ಚಿಂತನೆಗಳುಳ್ಳ ಉದಾತ್ತ ವ್ಯಕ್ತಿತ್ವದ ವ್ಯಕ್ತಿಗಳನ್ನು ಹೀನ ಮನಸ್ಸಿನ, ಸಂಕುಚಿತ ವ್ಯಕ್ತಿತ್ವದ ವ್ಯಕ್ತಿಗಳು ಮುಗಿಸಿ ಬಿಡಬಹುದು.
**ಹಾಗಿದ್ದರೂ ಉದಾತ್ತವಾಗಿ ಭಾವಿಸಿ.**

೭. ಜನರು ದುರ್ಬಲಪರರಾಗಿರುತ್ತಾರೆ. ಆದರೆ ಪ್ರಬಲರನ್ನೇ ಅನುಸರಿಸುತ್ತಾರೆ.
**ಹಾಗಿದರೂ ದುರ್ಬಲರ ಪರವಾಗಿಯೇ ಹೋರಾಡಿ**

೮. ನೀವು ಹಲವಾರು ವರ್ಷಗಳ ಪರಿಶ್ರಮದಿಂದ ಕಟ್ಟಿದ್ದನ್ನು ರಾತ್ರೋರಾತ್ರಿ ಧ್ವಂಸ ಮಾಡಿಬಿಡಬಹುದು.
**ಹಾಗಿದರೂ ನಿರ್ಮಿಸಿ.**

೯. ಜನರು ಸಹಾಯವನ್ನು ಅಪೇಕ್ಷಿಸುತ್ತಾರೆ. ಆದರೆ ನೀವು ಸಹಾಯ ಮಾಡಿದಾಗ ನಿಮ್ಮ ಮೇಲೆ ಸವಾರಿ ಮಾಡಬಹುದು.
**ಹಾಗಿದ್ದರೂ ಜನರಿಗೆ ಸಹಾಯ ಮಾಡಿ.**

೧೦. ನೀವು ಜಗತ್ತಿಗೆ ಅತ್ಯುತ್ತಮವಾದುದನ್ನು ನೀಡಿದಾಗ ಕೂಡ ನಿಮ್ಮನ್ನು ತಿರಸ್ಕರಿಸುತ್ತಾರೆ.
**ಹಾಗಿದ್ದರೂ ನಿಮ್ಮಲ್ಲಿರುವ ಅತ್ಯುತ್ತಮವಾದುದನ್ನೇ ಜಗತ್ತಿಗೆ ನೀಡಿ.**